# ಜೆಎಸ್ಎಸ್ ಮಾಸಪತ್ರಿಕೆ

ಜೆಎಸ್ಎಸ್ ಮಹಾವಿದ್ಯಾಪೀಠದ ವಾರ್ತಾಪತ್ರ

ಸಂಚಿಕೆ 81 ಆಗಸ್ಟ್ 2009




## ಗುರುಚೇತನಕ್ಕೆ ನಮನ

ಒಂದು ಸಹಸ್ರಮಾನಕ್ಕೂ ಮೀರಿದ ಸುದೀರ್ಘ ಇತಿಹಾಸವನ್ನು ಹೊಂದಿರುವ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಇಪ್ಪತ್ತೂರನೆಯ ಜಗದ್ಗುರುಗಳಾದ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಶ್ರೀಮಠದ ಕಾರ್ಯವ್ಯಾಪ್ತಿಯನ್ನು ಅಭೂತಪೂರ್ವವಾಗಿ ವಿಸ್ತರಿಸಿದವರು. ಅವರು ಶ್ರೀಪೀಠದ ಗುರುಪರಂಪರೆಯ ಜ್ಞಾನಶಕ್ತಿ, ತಪಶ್ಶಕ್ತಿ ಹಾಗೂ ಕ್ರಿಯಾಶಕ್ತಿಗಳೆಲ್ಲವೂ ಏಕೀಭವಿಸಿದಂತಹ ಮಹಾನ್ ಚೇತನವಾಗಿದ್ದರು. ಸಮಾಜದ ಎಲ್ಲ ಸಮಸ್ಯೆಗಳ ಮೂಲ ಕಾರಣ ಅವಿದ್ಯೆ ಎನ್ನುವುದನ್ನು ಅರಿತಿದ್ದ ಶ್ರೀಗಳವರು ಉಚಿತ ವಿದ್ಯಾರ್ಥಿನಿಲಯಗಳನ್ನು ತೆರೆಯುವುದರ ಮೂಲಕ ಗ್ರಾಮೀಣ ಪ್ರದೇಶದ ಯುವಜನತೆಯನ್ನು ಅಕ್ಷರಸಂಸ್ಕೃತಿಯ ಕಡೆಗೆ ಸೆಳೆದರು. ಸ್ವಾತಂತ್ರ್ಯಪೂರ್ವದ ದಿನಮಾನಗಳಲ್ಲಿ ಅದು ಸಾಮಾನ್ಯವಾದ ಕೆಲಸವಾಗಿರಲಿಲ್ಲ. ಆದರೂ ತಮ್ಮ ಧೀಶಕ್ತಿಯಿಂದ ಅವರು ಅಸಾಧ್ಯವಾದುದನ್ನು ಸಾಧ್ಯಮಾಡಿ ಜನಸಮುದಾಯದ ಭಾಗ್ಯಜ್ಯೋತಿಯಾದರು. ಅನ್ನ, ಅರಿವು, ಆರೋಗ್ಯ, ಕಲೆ, ಸಾಹಿತ್ಯ, ಸಂಗೀತ, ಸಮಾಜಸೇವೆ, ಧಾರ್ಮಿಕ ಚಟುವಟಿಕೆಗಳು - ಹೀಗೆ ಇಂದು ಶ್ರೀಮಠ ಹಮ್ಮಿಕೊಂಡಿರುವ ಎಲ್ಲ ತೆರನಾದ ಸೇವೆಗಳಿಗೆ ಸುಭದ್ರ ಬುನಾದಿ ಹಾಕಿದವರು.

ದಿನಾಂಕ 29.8.2009 ರಂದು ಅವರ 94 ನೆಯ ಜಯಂತಿ ಮಹೋತ್ಸವ. ನಮ್ಮೆಲ್ಲರಿಗೂ ಪರಮ ಪವಿತ್ರವಾದ ದಿನ. ಅವರ ದಿವ್ಯಸ್ಮರಣೆಯ ಮೂಲಕ, ಅವರ ಸದ್ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ, ಅವರು ಬಾಳಿದ ಆದರ್ಶಗಳನ್ನು ಸಾಕಾರಗೊಳಿಸಲು ಕಂಕಣಬದ್ಧರಾಗಬೇಕಾದ ಮಹಾಸುದಿನ.



ಮೈಸೂರು ಶ್ರೀ ಸುತ್ತೂರು ಮಠದ ಶರಣತತ್ವ ಪ್ರಚಾರ ಸಮಿತಿಯಿಂದ ಶ್ರಾವಣಮಾಸ ಪ್ರವಚನದ ಉದ್ಘಾಟನೆಯನ್ನು ಡಾ. ಸಿ.ಜಿ. ಬೆಟ್‌ಸೂರ್ ಮಠ್ ಅವರು ನೆರವೇರಿಸುತ್ತಿರುವುದು. ಚಿತ್ರದಲ್ಲಿ ವಾಟಾಳು ಶ್ರೀಗಳು, ಹೊಸಮಠದ ಶ್ರೀಗಳು, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಬಿ.ಎನ್. ಬೆಟ್‌ಕೆರೂರ್, ಶ್ರೀ ಕೆ.ಎಂ. ನಾಗಣ್ಣಾಚಾರ್ ಮತ್ತು ಡಾ. ಎನ್. ಕೆ. ರಾಮಶೇಷನ್ ಅವರುಗಳನ್ನು ಕಾಣಬಹುದು



ಜೆಎಸ್‌ಎಸ್ ವೈದ್ಯಕೀಯ ವಿದ್ಯಾಲಯದ ಶ್ವಾಸಕೋಶ (ಪಲ್ಮನಾಲಜಿ ವಿಭಾಗದಲ್ಲಿ) ಸಿಎಂಇ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್ ಉದ್ಘಾಟಿಸುತ್ತಿದ್ದಾರೆ. ಚಂದೀಗರ್‌ನ ಪ್ರೊ. ಎಸ್.ಕೆ. ಜಿಂದಾಲ್, ಪ್ರಾಂಶುಪಾಲ ಡಾ. ಎಚ್. ಬಸವನಗೌಡಪ್ಪ, ಡಾ. ಎಂ.ಡಿ. ರವಿ, ಡಾ. ವೀರಭದ್ರಪ್ಪ ಮತ್ತು ಡಾ. ಬಿ.ಎಸ್. ಜಯರಾಜ್ ಅವರುಗಳು ಚಿತ್ರದಲ್ಲಿದ್ದಾರೆ



ಜೆಎಸ್‌ಎಸ್ ವಿಶ್ವವಿದ್ಯಾನಿಲಯ ಮತ್ತು ಅಮೆರಿಕಾದ ಆಲ್ಫಾಜೆನೆ ಬಯೊಸೈನ್ಸಸ್ ನಡುವೆ ಒಡಂಬಡಿಕೆ ಏರ್ಪಟ್ಟ ಸಂದರ್ಭದಲ್ಲಿ ಕುಲಪತಿ ಡಾ. ಬಿ. ಸುರೇಶ್, ಎಜಿಟಿ ಪ್ರತಿನಿಧಿ ಡಾ. ಅಸಿತ್ ಪಾಂಜಾ ಮುತ್ತಿತರರು



ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನಲ್ಲಿ ಮಹಾವಿದ್ಯಾಪೀಠದ ಉದ್ಘಾಟನಾ ಮಹೋತ್ಸವದ ಸಂದರ್ಭದಲ್ಲಿ ವಿ.ಎಸ್.ಎನ್.ಎ. ಅಧ್ಯಕ್ಷರಾದ ಶ್ರೀ ಸುಂದರೇಶ್ ಸಿದ್ದಯ್ಯ, ಪೂಜ್ಯ ಸುತ್ತೂರು ಶ್ರೀಗಳವರು, ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಮತ್ತು ಭಾರತೀಯ ರಾಯಭಾರ ಕಚೇರಿಯ ಶ್ರೀ ಸಂಜಯ್ ಸಿನ್ಹಾ ಅವರುಗಳನ್ನು ಕಾಣಬಹುದು

## ಎಲ್ಲರನ್ನೂ ಒಗ್ಗೂಡಿಸುವ ಶಕ್ತಿ ಆಧ್ಯಾತ್ಮಿಕತೆ — ಐಸ್ ಲೆಗೆಟ್

"ನಾವು ಯಾವುದೇ ಪ್ರದೇಶ, ಧರ್ಮಕ್ಕೆ ಸೇರಿರಲಿ, ಬಡವ-ಶ್ರೀಮಂತರಿರಲಿ, ನಾವೆಲ್ಲಾ ಒಟ್ಟಾಗಿ ಜೀವನ ನಡೆಸುವ ಅಗತ್ಯವಿದೆ" ಎಂದು ಅಮೆರಿಕದ ಮಾಂಟ್ಗೊಮರಿ ಕೌಂಟಿ ಎಗ್ಸಿಕ್ಯುಟಿವ್ ಮಿ. ಐಸ್ ಲೆಗೆಟ್ ಅವರು ತಿಳಿಸಿದರು.

ಇತ್ತೀಚೆಗೆ ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನಲ್ಲಿ ವಿಗ್ರಹಗಳ ಪ್ರತಿಷ್ಠಾಪನೆ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಇಂಥ ಅನ್ಯೋನ್ಯ ಸಂಬಂಧಗಳು ಬೆಳೆಯುವುದು ಆಧ್ಯಾತ್ಮಿಕತೆಯಿಂದ ಮಾತ್ರ ಸಾಧ್ಯ. ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ ಇಲ್ಲಿ ಆ ಕಾರ್ಯವನ್ನು ಸಮರ್ಥವಾಗಿ ಮಾಡುತ್ತಿದೆ. ನಾನು ಅದನ್ನು ಹತ್ತಿರದಿಂದ ಗಮನಿಸುತ್ತಿದ್ದೇನೆ ಎಂದರಲ್ಲದೆ, ಕೇಂದ್ರದ ಎಲ್ಲ ಚಟುವಟಿಕೆಗಳಿಗೂ ತಮ್ಮ ಸಂಪೂರ್ಣ ಸಹಕಾರ ಇದೆ ಎಂದು ತಿಳಿಸಿದರು.

ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು ಮಾತನಾಡಿ, "ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ದಿವ್ಯಸಂಕಲ್ಪದಂತೆ ಇಲ್ಲಿ ಈ ಆಧ್ಯಾತ್ಮಿಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರು ಅಹರ್ನಿಶಿ ಶ್ರಮಿಸುತ್ತಿರುವುದರಿಂದ ಕೇಂದ್ರದ ಬೆಳವಣಿಗೆ ಸಾಧ್ಯವಾಗುತ್ತದೆ. ಅನೇಕ ಸಾಧುಸಂತರು ಹಾಗೂ ಪೂಜ್ಯರುಗಳ ಆಗಮನದಿಂದ ಕೇಂದ್ರ ಹೆಚ್ಚು ಹೆಚ್ಚು ಬೆಳೆಯುತ್ತಿದೆ" ಎಂದರು.

### ವಿಗ್ರಹಗಳ ಉದ್ಘಾಟನೆ

ಜೆಎಸ್‌ಎಸ್ ಮಹಾವಿದ್ಯಾಪೀಠದ ಅಮೆರಿಕದ ಶಾಖೆಯನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ಮಾತನಾಡಿ, "ಮನಸ್ಸಿನಿಂದ ರಾಗ-ದ್ವೇಷ ಭಾವನೆಗಳು ಹೋದಾಗ ಮನುಷ್ಯ ಸಹಜವಾಗಿ ಸಂತೋಷದಿಂದಿರಲು ಸಾಧ್ಯ" ಎಂದು ನುಡಿದರು.

ಮೂಡಬಿದರೆ ಜೈನಮತದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಮಾತನಾಡಿ, "ಭೌತಿಕ ಸಂಪತ್ತುಳ್ಳ ಈ ಭಾಗದ ಜನಗಳಿಗೆ ತಮ್ಮ ಮಾನಸಿಕ ಒತ್ತಡಗಳಿಂದ ಬಿಡುಗಡೆಗೊಳ್ಳಲು ಜೆಎಸ್‌ಎಸ್ ಸ್ಪಿರಿಚ್ಯುಯಲ್ ಕೇಂದ್ರ ಸಹಕಾರಿಯಾಗಲಿ. ಇಲ್ಲಿ

ದೇವಾಲಯವನ್ನು ಸ್ಥಾಪಿಸುವುದರ ಮೂಲಕ ಸುತ್ತೂರು ಮಠ ಧಾರ್ಮಿಕ ಪ್ರಸಾರಕ್ಕೆ ಅವಕಾಶ ಕಲ್ಪಿಸಿದೆ. ದೇವಾಲಯದಲ್ಲಿ ದೇವತೆಗಳಿಗೆ ಪೂರ್ಣಕುಂಭ ಅಭಿಷೇಕ ಮಾಡುವ ರೀತಿ ಯಲ್ಲಿಯೇ ನಮ್ಮ ಮನಸ್ಸನ್ನು ತುಂಬಿಕೊಳ್ಳುವ ಅಗತ್ಯವಿದೆ" ಎಂದು ತಿಳಿಸಿದರು.

ಅಮೆರಿಕದ ಭಾರತ ರಾಯಭಾರಿ ಕಛೇರಿಯ ಶ್ರೀ ಸಂಜಯ್ ಸಿನ್ಹಾರವರು ಮಾತನಾಡಿ ಜೆಎಸ್‌ಎಸ್ ಮಹಾವಿದ್ಯಾಪೀಠವು ದೇಶವಿದೇಶದಲ್ಲಿ ಹಲವಾರು ದಶಕಗಳಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿದೆ. ಅದನ್ನು ಈಗ ಅಮೆರಿಕ ದೇಶಕ್ಕೂ ವಿಸ್ತರಿಸಿರುವುದು ಭಾರತೀಯ ಸಂಸ್ಕೃತಿ, ಕಲೆಗಳ ಪ್ರಸಾರಕ್ಕೆ ಹೆಚ್ಚು ಸಹಕಾರಿಯಾಗಲಿದೆ. ಮಹಾವಿದ್ಯಾಪೀಠ ಈಗಾಗಲೇ ಭಾರತದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಮಹಾನ್ ಕೊಡುಗೆ ನೀಡಿದ್ದು, ಅದು ಇಲ್ಲಿಗೂ ವಿಸ್ತರಿಸುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ಅಭಿಪ್ರಾಯಪಟ್ಟರು.

ಮೇಲುಕೋಟೆ ಶಾಸಕ ಶ್ರೀ ಸಿ.ಎಸ್. ಪುಟ್ಟರಾಜು, 'ಅಕ್ಕ'ದ ಅಧ್ಯಕ್ಷ ಶ್ರೀ ಅಮರನಾಥಗೌಡ, ಉತ್ತರ ಅಮೆರಿಕದ ಜೈನ ಸಮಾಜದ ಉಪಾಧ್ಯಕ್ಷ ಶ್ರೀ ಸುಶೀಲ್ ಜೈನ್, 'ಅಕ್ಕ'ದ ಕಾರ್ಯಾಧ್ಯಕ್ಷ ಶ್ರೀ ರವಿ ಡೆಂಕಣಿಕೋಟೆ, ಅಮೆರಿಕ ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀ ವಿಶ್ವಾಮಿತ್ರ, ವಾಷಿಂಗ್ಟನ್ ಡಿ.ಸಿ. ಕಾವೇರಿ ಕನ್ನಡ ಕೂಟದ ಅಧ್ಯಕ್ಷೆ ಶ್ರೀಮತಿ ಮೀನಾ ರಾವ್, ವಿಎಸ್‌ಎನ್‌ಎ ಅಧ್ಯಕ್ಷರಾದ ಶ್ರೀ ಸುಂದರೇಶ್ ಸಿದ್ದಯ್ಯ, ಬೆಂಗಳೂರಿನ ವಿವೇಕಾನಂದ ಅನುಸಂಧಾನ ಸಂಸ್ಥೆಯ ಶ್ರೀ ಅಶೋಕ್ ಕುಮಾರ್, ಕಾವೇರಿ ಕನ್ನಡ ಕೂಟದ ಸದಸ್ಯ ಹಾಗೂ ಅಂಕಣಕಾರ ಶ್ರೀ ಶ್ರೀವತ್ಸ ಜ್ಯೋಶಿ, ಮಾಜಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಮೆರಿಕ ಶಾಖೆಯ ಅಧ್ಯಕ್ಷ ಡಾ. ಮೃತ್ಯುಂಜಯ ಗೊಂಚಿಗಾರ್, ಮಾಂಟ್ಗೊಮರಿ ಕೌಂಟಿಯ ಏಷ್ಯಾ ಕಮ್ಯುನಿಟಿ ಅಧ್ಯಕ್ಷರಾದ ಲಿಲ್ಲಿ ಚಿ ಹಾಗೂ ಅಟಾರ್ನಿ ಮಿ. ಸ್ಟೀವ್ ರಾಬಿನ್ಸ್ ಅವರುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ಜುಲೈ 10 ರಂದು ಬೆಳಗ್ಗೆ ತಾತ್ಕಾಲಿಕವಾಗಿ ನಿರ್ಮಿಸಿರುವ ದೇವಾಲಯವನ್ನು ಉದ್ಘಾಟಿಸಲಾಯಿತು. ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು. ಜುಲೈ 12 ರಂದು ವಿಧ್ಯುಕ್ತವಾಗಿ ಮೂರ್ತಿಗಳ ಪ್ರತಿಷ್ಠಾಪನೆಯನ್ನು ನೆರವೇರಿಸಲಾಯಿತು. ವಿದ್ವಾನ್ ಶ್ರೀ ಮಲ್ಲಣ್ಣ ಹಾಗೂ ಶ್ರೀ ಮಂಜುನಾಥ್‌ರವರು ಮೂರ್ತಿಗಳ ಪ್ರತಿಷ್ಠಾಪನೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಏರ್ಪಾಟಾಗಿದ್ದ ಖ್ಯಾತ ಪಿಟೀಲು ವಿದ್ವಾಂಸರಾದ ಮೈಸೂರು ಡಾ. ಎಂ. ಮಂಜುನಾಥ್‌ರವರ ಸಂಗೀತ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತು. ಪ್ರಾರಂಭದಲ್ಲಿ ಅವರು ಭಾರತದ ಶಾಸ್ತ್ರೀಯ ಸಂಗೀತದ ಮಹತ್ವ ಹಾಗೂ ವಿಶೇಷತೆಗಳ ಬಗೆಗೆ ಸಂಕ್ಷಿಪ್ತ ವಿವರಣೆ ನೀಡಿದರು. ನ್ಯೂಜೆರ್ಸಿಯ ಶ್ರೀ ಅರುಣ್ ರಾಮಮೂರ್ತಿ ಹಾಗೂ ಪೂವಲೂರು ಶ್ರೀ ಶ್ರೀನಿವಾಸ್‌ರವರು ಪಕ್ಕವಾದ್ಯ ಸಹಕಾರ ನೀಡಿದರು. ಖ್ಯಾತ ಭರತನಾಟ್ಯ ಕಲಾವಿದೆ ಶ್ರೀಮತಿ ವಸುಂಧರಾ ದೊರೆಸ್ವಾಮಿಯವರು ಅತ್ಯಾಕರ್ಷಕವಾಗಿ ಭರತನಾಟ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ಶುಭಾ ಮರವಾಡ, ಶ್ರೀಮತಿ ಶೀಲಾ ಕುಮಾರ್ ಹಾಗೂ ಶ್ರೀಮತಿ ಉಮಾ ಇಟಗಿಯವರುಗಳು ಸಹ ಭರತನಾಟ್ಯ ಪ್ರದರ್ಶನ ನೀಡಿದರು. ಸ್ಥಳೀಯ ಕಲಾವಿದರು ಮೂರು ದಿನಗಳೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನ ಪರಿಚಯವನ್ನು ಶ್ರೀ ಕುಮಾರ್ ರಾಜಶೇಖರ್ ಹಾಗೂ ಶ್ರೀ ಮಹೇಶ್ ನಾಗರಾಜಯ್ಯರವರು ಮಾಡಿದರು. ಶ್ರೀ ಉಮೇಶ್ ಮೂರ್ತಿ, ಶ್ರೀಮತಿ ಕುಮಾರಿ ರಾವ್, ಅಧ್ಯಕ್ಷರಾದ ಶ್ರೀ ಸುಭಾಷ್ ಮಲಘಾನ್, ಶ್ರೀ ಸಂಜಾತ್ ಸೂಲಕುಂಟೆ, ಶ್ರೀ ಹೇಮಂತರಾಜು, ಶ್ರೀ ಸುಬ್ಬಣ್ಣ ಇವರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮಗಳನ್ನು ಶ್ರೀ ರಾಜೇಂದ್ರ ಜೀಮಾರಹಳ್ಳಿ, ಶ್ರೀಮತಿ ವೀಣಾ ತೋಟಕುರ, ಶ್ರೀಮತಿ ಜಯಶ್ರೀ ಜಗದೀಶ್, ಶ್ರೀಮತಿ ಸೋನಲ್ ಸೂಲಕುಂಟೆ, ಶ್ರೀ ಮೃತ್ಯುಂಜಯ ಮಹಾಶೆಟ್ಟಿ, ಶ್ರೀಮತಿ ಪ್ರಭಾ ಮರವಾಡ, ಶ್ರೀ ನಾಗಶಂಕರ್, ಶ್ರೀ ಪುಟ್ಟರಾಜು, ಶ್ರೀ ಮಾದಯ್ಯ, ಶ್ರೀಮತಿ ಶಾಂತಲಾ ಬಸಪ್ಪ ಹಾಗೂ ಶ್ರೀಮತಿ ರೇಷ್ಮಾ ಕೋಟಿ ನಿರೂಪಿಸಿದರು. ಅಮೆರಿಕಾದ ವಿವಿಧ ಪ್ರಾಂತ್ಯಗಳು, ಕೆನಡಾ ಹಾಗೂ ಭಾರತದಿಂದ ಆಗಮಿಸಿದ್ದ ಪ್ರತಿನಿಧಿಗಳು ಮೂರು ದಿನಗಳ ಕಾರ್ಯಕ್ರಮದುದ್ದಕ್ಕೂ ಉತ್ಸಾಹದಿಂದ ಭಾಗವಹಿಸಿದ್ದರು.

# ವಿಶ್ವ ನಾಗರಿಕರಾಗಲು ಇನ್‌ಫೋಸಿಸ್ ಅಧಿಕಾರಿ ಕರೆ



ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅಂತಿಮ ಪದವಿ ವಿದ್ಯಾರ್ಥಿನಿಯರಿಗೆ ಉದ್ಯೋಗ ಮತ್ತು ಮಾಹಿತಿ ಕೇಂದ್ರದಿಂದ ಎರಡು ವಾರಗಳ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಇದೇ ಕಾಲೇಜಿನಲ್ಲಿ ಕ್ಯಾಂಪಸ್ ಸೆಲೆಕ್ಷನ್ ಮೂಲಕ  ಎಚ್‌ಎಸ್‌ಬಿಸಿ ಕಂಪೆನಿಗೆ ಆಯ್ಕೆಯಾಗಿ ಅನಂತರ ಉನ್ನತ ವ್ಯಾಸಂಗಕ್ಕಾಗಿ ಆಸ್ಟ್ರೇಲಿಯಾಕ್ಕೆ ತೆರಳಿ ಮಾಸ್ಟರ್ಸ್ ಇನ್ ಮಾಸ್ ಕಮ್ಯುನಿಕೇಷನ್ ಅಂಡ್ ಮಾಸ್ಟರ್ಸ್ ಇನ್ ಇನ್‌ಫರ್ಮೇಷನ್ ಸಿಸ್ಟಂ ಸ್ನಾತಕೋತ್ತರ ವಿದ್ಯಾಭ್ಯಾಸ ಮುಗಿಸಿ ಸದ್ಯ ಅಲ್ಲಿಯೇ ಕೆಲಸ ನಿರ್ವಹಿಸುತ್ತಿರುವ ಕು. ಅವನಿಯವರು ಒಂದು ತಿಂಗಳ ರಜೆಯ ಮೇರೆಗೆ ಭಾರತಕ್ಕೆ ಆಗಮಿಸಿದ್ದು, ತನ್ನ ಕಾಲೇಜಿನ ಕಿರಿಯ ಸಹೋದರಿಯರಿಗೆ ಉದ್ಯೋಗಾವಕಾಶಗಳ ಕುರಿತು ಹದಿನೈದು ದಿನಗಳ ತರಬೇತಿ ನೀಡಬಯಸಿದರು. ಜೂನ್ 29, 2009 ರಿಂದ ಜುಲೈ 10, 2009 ರವರೆಗೆ ಸುಮಾರು 400 ಜನ ವಿದ್ಯಾರ್ಥಿನಿಯರಿಗೆ ಈ ತರಬೇತಿಯನ್ನು ನೀಡಲಾಯಿತು.

ಕಾಲೇಜಿನ ಬಿ.ಎ., ಬಿ.ಕಾಂ., ಬಿ.ಬಿ.ಎಂ. ಹಾಗೂ ಬಿ.ಎಸ್‌ಸಿ. ವಿದ್ಯಾರ್ಥಿನಿಯರು ಈ ತರಬೇತಿಯ ಅನುಕೂಲವನ್ನು ಪಡೆದರು. ಈ ಕಾರ್ಯಾಗಾರದ ಮುಕ್ತಾಯ ಸಮಾರಂಭ ಜುಲೈ11, 2009 ರಂದು ಕಾಲೇಜಿನಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗ ಹಾಗೂ ಪ್ರಾಜೆಕ್ಟ್ ಜೆನಿಸಿಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಆಶಿಶ್ ಮಿತ್ತಲ್‌ರವರು ಆಗಮಿಸಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ವಿಭಾಗದ ನಿರ್ದೇಶಕರಾದ ಪ್ರೊ. ಟಿ.ಡಿ. ಸುಬ್ಬಣ್ಣನವರು ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾದ ಶ್ರೀ ಆಶಿಶ್ ಮಿತ್ತಲ್‌ರವರು ಮಾತನಾಡಿ "ವಿದ್ಯಾರ್ಥಿನಿಯರು ವಿಶ್ವನಾಗರಿಕರಾಗಿ ಕೆಲಸ ನಿರ್ವಹಿಸಲು ತಯಾರಾಗಿರಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯಾವುದೇ ಸಮಯದಲ್ಲಿ ಪ್ರಪಂಚದ ಯಾವುದೇ ಭಾಗದಲ್ಲಾದರೂ ಕೆಲಸ ಮಾಡಲು ಸಿದ್ಧರಿರಬೇಕು. ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿನಿಯರನ್ನು ಈ ನಿಟ್ಟಿನಲ್ಲಿ ಸರಿಯಾಗಿ ರೂಪಿಸುವುದಲ್ಲದೆ, ಅವರ ಮುಂದಿನ ಜೀವನದಲ್ಲಿ ಹಾಗೂ ಉದ್ಯೋಗ ನಿರ್ವಹಣೆಯಲ್ಲಿ ಮಹತ್ವಪೂರ್ಣ ಪಾತ್ರ ವಹಿಸಲಿದೆ" ಎಂದು ಹೇಳಿದರು.

ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಪ್ರೊ. ಸುಬ್ಬಣ್ಣನವರು ಜೆಎಸ್‌ಎಸ್ ಮಹಿಳಾ ಕಾಲೇಜಿನ ಉದ್ಯೋಗ ಮಾಹಿತಿ ಕೇಂದ್ರವು ಬಹಳ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದ್ದು ಕಳೆದ ಹಲವಾರು ವರ್ಷಗಳಿಂದ ಅನೇಕ ವಿದ್ಯಾರ್ಥಿನಿಯರಿಗೆ ಉದ್ಯೋಗ ದೊರಕಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆಯೆಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಆಕರ್ಷಣೆಯಾದ ಕು. ಅವನಿಯವರು ಮಾತನಾಡಿ ಕಾಲೇಜು ಈ ಕಾರ್ಯಾಗಾರವನ್ನು ನಡೆಸಲು ಅವಕಾಶ ಕೊಟ್ಟಿದ್ದಕ್ಕೆ ಆಡಳಿತ ಮಂಡಳಿಗೆ ಧನ್ಯವಾದ ವ್ಯಕ್ತಪಡಿಸಿದರು.

ಉದ್ಯೋಗ ಮಾಹಿತಿ ಕೇಂದ್ರದ ಅಧಿಕಾರಿ ಹಾಗೂ ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀ ಅನಿಲ್‌ಕುಮಾರ್ ರವರು ಮಾತನಾಡಿ "ಪ್ರಸ್ತುತ ಪರಿಸ್ಥಿತಿಯಲ್ಲಿ ಉದ್ಯೋಗವನ್ನು ನೀಡುವ ಕಂಪನಿಗಳು ಕಡಿಮೆಯಾಗಿವೆ. ಆದರೆ ಉದ್ಯೋಗಕ್ಕೆ ಬರ ಬಂದಿಲ್ಲ. ಕಂಪನಿಗಳು ವಿದ್ಯಾರ್ಥಿಗಳಿಂದ ಹೆಚ್ಚಿನ ಜ್ಞಾನ ಹಾಗೂ ಕೌಶಲವನ್ನು ನಿರೀಕ್ಷಿಸುತ್ತವೆ. ಆದುದರಿಂದ ಇಂದು ಉದ್ಯೋಗವನ್ನು ಬಯಸುವ ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಹಾಗೂ ಛಲದಿಂದ ಕೆಲಸ ಮಾಡಬೇಕಾಗುತ್ತದೆ" ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ರಾದ ಪ್ರೊ. ಜಿ.ಕೆ. ಚಂದ್ರಶೇಖರಪ್ಪನವರು "ನಮ್ಮ ಕಾಲೇಜಿಗೆ ಕು. ಅವನಿಯಂತಹ ವಿದ್ಯಾರ್ಥಿನಿಯರ ಅವಶ್ಯಕತೆ ಇದೆ. ಇಲ್ಲಿನ ಹಳೆಯ ವಿದ್ಯಾರ್ಥಿನಿಯಾದ ಈಕೆ ಸ್ವಪ್ರೇರಣೆಯಿಂದ ಏನೂ ಬಯಸದೆ ತನ್ನ ಅಮೂಲ್ಯ ರಜೆಯ ವೇಳೆಯಲ್ಲಿ ತನ್ನ ಕಿರಿಯ ಸಹೋದರಿಯರಿಗೆ ಮಾರ್ಗದರ್ಶನ ನೀಡಲು ಬಂದಿರುವುದು ಅಭಿನಂದನಾರ್ಹವಾಗಿದೆ" ಎಂದು ಪ್ರಶಂಸಿಸಿದರು. ಕಾಲೇಜಿನ ಪರವಾಗಿ ಕು. ಅವನಿಯವರಿಗೆ ಕಿರುಕಾಣಿಕೆ ನೀಡಿ ಗೌರವಿಸಲಾಯಿತು.

# ಎಸ್‌ಜೆಸಿಇ ಚಟುವಟಿಕೆಗಳು

## ಎವಲ್ಯೂಷನ್ 2009

"It is not the strongest of species that survives nor the most intelligent. It is the one that is the most adaptable to change. Don't just exist, evolve" ಎಂಬ ವ್ಯಾಖ್ಯಾನವನ್ನು ಜಗತ್ತಿಗೆ ನೀಡಿರುವ ಸುಪ್ರಸಿದ್ಧ ಬ್ರಿಟಿಷ್ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್‌ರವರ 200 ನೆಯ ಜಯಂತಿಯು ಸಂಸ್ಥೆಯ ಬಯೋಟೆಕ್ನಾಲಜಿ ವಿಭಾಗದ 'ಎವಲ್ಯೂಷನ್ - 2009' ಉತ್ಸವದ ಮುಖ್ಯ ವಿಷಯವಾಗಿತ್ತು.

ನಿಯೋಜಿನ್- ಎಸ್‌ಜೆಸಿಇ ಬಯೋಟೆಕ್ ಇಂಜಿನಿಯರುಗಳ ಸಂಘದ ಆಶ್ರಯದಲ್ಲಿ ದಿನಾಂಕ 16 ಹಾಗೂ 17 ರ ಏಪ್ರಿಲ್ ಮಾಹೆಯಲ್ಲಿ ನಡೆದ ಈ ರಾಜ್ಯಮಟ್ಟದ ಉತ್ಸವವು ಕರ್ನಾಟಕಾದ್ಯಂತ ಜೈವಿಕ ತಂತ್ರಜ್ಞಾನ ಕ್ಷೇತ್ರದ ವಿದ್ಯಾರ್ಥಿಗಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ಮೈಸೂರಿನ ಸಿಎಫ್‌ಟಿಆರ್‌ಐ ನಲ್ಲಿ ಫರ್‌ಮೆಂಟೇಷನ್ ಟೆಕ್ನಾಲಜಿ ಅಂಡ್ ಬಯೋ ಇಂಜಿನಿಯರಿಂಗ್ ಮುಖ್ಯಸ್ಥರಾದ ಪ್ರೊ. ಎನ್.ಜೆ. ಕಾರಂತ್ ಅವರು ಉದ್ಘಾಟಿಸಿದ ಈ ಉತ್ಸವದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರರವರು ಅಧ್ಯಕ್ಷತೆ ವಹಿಸಿದ್ದರು. ಡಾ. ಎಂ. ಸಿ. ಮಿಶ್ರಾ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಡಾ. ಎಸ್.ಸಿ. ಹಿರೇಮಠ್, ಪ್ರಾಧ್ಯಾಪಕರು ಮತ್ತು ವಿಭಾಗದ ಎಲ್ಲ ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. 'ಇನ್‌ಸೈಟ್-10' ಎಂಬ ಸುದ್ದಿಪತ್ರವನ್ನು ಸಿಎಫ್‌ಟಿಆರ್‌ಐ ಪ್ಲಾಂಟ್ ಸೆಲ್ ಬಯೋಟೆಕ್ನಾಲಜಿ ವಿಭಾಗದ ಉಪ ನಿರ್ದೇಶಕರು ಹಾಗೂ ಮುಖ್ಯಸ್ಥರಾದ ಡಾ. ಜಿ. ಎ. ರವಿಶಂಕರ್‌ರವರು ಬಿಡುಗಡೆ ಮಾಡಿದರಲ್ಲದೆ Neutraceuticals ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ದಿನಾಂಕ 17.5.2009 ರಂದು ಡಾರ್ವಿನ್ಸ್ ಥಿಯರಿ ಆಫ್ ಎವಲ್ಯೂಷನ್ ಎಂಬ ವಿಷಯದ ಬಗ್ಗೆ ಡಾ. ಎಸ್.ಸಿ. ಹಿರೇಮಠ್‌ರವರು ಉಪನ್ಯಾಸ ನೀಡಿದರು. ನಂತರ 'ಪಿಟಿಯೋಲ್ ಬಾಂಡ್: ಆ್ಯನ್ ಐಡಿಯಾ' ಎಂಬ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಮೈಸೂರು ಬೆಕಾರ್ಡಿ ಮಾರ್ಟಿನಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕರಾದ ಡಾ. ಭವಾನಿಶಂಕರ್, ಮೈಸೂರು ಲ್ಯಾಬ್‌ಲ್ಯಾಂಡ್ ಬಯೋಟೆಕ್ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಗೀತಾ ಸಿಂಗ್, ಮೈಸೂರು ಮ್ಯೂರೋಪೈ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎಂ.ಜಿ. ಬೈಂದನೂರ್ ಇವರುಗಳ ಸಮ್ಮುಖದಲ್ಲಿ 'ಜೈವಿಕ ತಂತ್ರಜ್ಞಾನದಲ್ಲಿ ಉದ್ಯೋಗಾವಕಾಶ' (Job opportunities in Biotechnology) ಎಂಬ ವಿಷಯದ ಬಗ್ಗೆ ವಿವಿಧ ಸ್ಪರ್ಧೆಗಳು ನಡೆದು ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸಹ ಏರ್ಪಡಿಸಲಾಗಿತ್ತು.

## ಅರ್ಥ್ ವೀಕ್



ಎಡದಿಂದ ಬಲ: ಡಾ. ಬಿ.ಜಿ. ಸಂಗಮೇಶ್ವರ, ಡಾ. ಬಿ.ಎಸ್. ಬಸವರಾಜಯ್ಯ ಮತ್ತು ಪರಿಸರ ತಂತ್ರಜ್ಞಾನ ಹಾಗೂ ಬಯೋಟೆಕ್ನಾಲಜಿ ವಿಭಾಗದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು

ಸಂಸ್ಥೆಯ ಪರಿಸರ ತಂತ್ರಜ್ಞಾನ ವಿಭಾಗದ ಆಶ್ರಯದಲ್ಲಿ ಪರಿಸರ ತಂತ್ರಜ್ಞಾನ ಇಂಜಿನಿಯರ್‌ಗಳ ಒಕ್ಕೂಟದ (EEA) ವತಿಯಿಂದ ಮೇ 11 ರಿಂದ 16 ರವರೆಗೆ ಒಂದು ವಾರ ಕಾಲ 'ಅರ್ಥ್ ವೀಕ್' ಶೀರ್ಷಿಕೆಯಲ್ಲಿ, ಜಾಗತಿಕ ತಾಪಮಾನ (Global Warming) ಹಾಗೂ ಅದರ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಅನೇಕ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಕಡಮೆ ಬಳಕೆ, ಪುನರ್ಬಳಕೆ, ಪುನರುಪಯೋಗ ಇವುಗಳು ಈ ಚಟುವಟಿಕೆಗಳ ಮುಖ್ಯ ಆಶಯವಾಗಿದ್ದು ಜಾಗತಿಕ ತಾಪಮಾನದ ದುಷ್ಪರಿಣಾಮಗಳು ಹಾಗೂ ಹವಾಮಾನ ಬದಲಾವಣೆಯನ್ನು ತಗ್ಗಿಸುವ ಬಗ್ಗೆ ಪೋಸ್ಟರ್‌ಗಳನ್ನು ಹಾಕಲಾಗಿತ್ತು.

ಮತ್ತೇನೂ ಪ್ರಪಂಚಿಲ್ಲಾಗಿ ನೀ ನಡೆಸಿದಂತೆ ನಡೆದೆ, ನೀ ನುಡಿಸಿದಂತೆ ನುಡಿದೆ - ಉರಿಲಿಂಗಪೆದ್ದಿ

ಎಂಟನೆಯ ಸೆಮಿಸ್ಟರ್‌ನ ವಿದ್ಯಾರ್ಥಿಗಳು 'ಗ್ರೀನ್ ಹಟ್' ಗುಡಿಸಲನ್ನು ನಿರ್ಮಿಸಿದ್ದರು. ಸಂಸ್ಥೆಯ ಆವರಣದಲ್ಲಿ ದೊರೆತ ತ್ಯಾಜ್ಯ ವಸ್ತುಗಳನ್ನು ಕಲೆಹಾಕಿ ಅವುಗಳನ್ನು ಮರುಬಳಕೆ ಮಾಡಿ, ಹಾಗೆ ದೊರೆತ ವಸ್ತುಗಳಿಂದಲೇ ಈ ಗುಡಿಸಲನ್ನು ನಿರ್ಮಿಸಿದ್ದರು. ಈ ಗುಡಿಸಲಿನ ಒಳಗೆ ಪರಿಸರದ ಕುರಿತಾದ ಹಲವಾರು ಪೋಸ್ಟರ್‌ಗಳನ್ನು ಅಳವಡಿಸಲಾಗಿತ್ತು.

ಭೂಮಿಯ ಸಂರಕ್ಷಣೆಯತ್ತ ಗಮನ ಸೆಳೆಯಲು 15.5.2009 ರಂದು ಪರಿಸರ ತಂತ್ರಜ್ಞಾನ ಇಂಜಿನಿಯರುಗಳ ಒಕ್ಕೂಟದ ಸದಸ್ಯರು 'ಗ್ರೀನ್ ಆರ್ಮಿ' ಟೀಷರ್ಟ್‌ಗಳನ್ನು ತೊಟ್ಟು 'ಗ್ರೀನ್ ಸಿಗ್ನೇಚರ್ ಕ್ಯಾಂಪೇನ್' ಯಾತ್ರೆಯನ್ನು ಏರ್ಪಡಿಸಿದ್ದರು. ಸಂಸ್ಥೆಯ ವಿಶೇಷಾಧಿಕಾರಿಗಳು, ಪ್ರಾಂಶುಪಾಲರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿಗಳು, ಪ್ರಾಧ್ಯಾಪಕರುಗಳು, ಬೋಧಕ ಮತ್ತು ನೌಕರ ವರ್ಗದವರು ಹಾಗೂ ವಿದ್ಯಾರ್ಥಿಗಳೆಲ್ಲರೂ 'ಗ್ರೀನ್ ಓಥ್' ಎಂಬ ಪ್ರಮಾಣವಚನ ಸ್ವೀಕರಿಸಿ ಈ ಗ್ರೀನ್ ಸಿಗ್ನೇಚರ್ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಸಂಸ್ಥೆಯ ವಿಶೇಷಾಧಿಕಾರಿಗಳಾದ ಡಾ. ಬಿ.ಎಸ್. ಬಸವರಾಜಯ್ಯನವರು 'ಗ್ರೀನ್ ವೋಟ್' ಮತ ಚಲಾಯಿಸಿ 'ಗ್ರೀನ್ ಹಟ್' ಅನ್ನು ಉದ್ಘಾಟಿಸಿದರು. ಹಲವಾರು ಗಣ್ಯ ವ್ಯಕ್ತಿಗಳು, ವಿದ್ಯಾರ್ಥಿಗಳು, ಪತ್ರಿಕಾ ವರದಿಗಾರರು ಹಾಗೂ ಆಸಕ್ತಿಯಿಂದ ಭಾಗವಹಿಸಿದ ಸಾರ್ವಜನಿಕರು 'ವೋಟ್ ಫಾರ್ ಗ್ರೀನ್' ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

***

ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದಲ್ಲಿ



ಪ್ರಾಧ್ಯಾಪಕರಾಗಿರುವ ಡಾ. ಸಿ.ಆರ್. ವೇಣುಗೋಪಾಲ್ ರವರಿಗೆ ಇಂಡಿಯನ್ ಸೆಮಿಕಂಡಕ್ಟರ್ ಅಸೋಸಿಯೇಷನ್ನಿನ (ISA) 2009 ನೇ ಸಾಲಿನ ಟೆಕ್ನೊವೇಷನ್ ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ.

## ಸುತ್ತಮುತ್ತ

### ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ನಂಜನಗೂಡು

ದ್ವಿತೀಯ ಪಿಯುಸಿ ತರಗತಿಗಳು ಪ್ರಾರಂಭವಾದ ಬಳಿಕ ದಿನಾಂಕ 15.6.2009 ರಂದು ಕಾಲೇಜಿನಲ್ಲಿ ಸರ್ಕಾರದ ಕಾರ್ಯಕ್ರಮವಾದ "ಆರೋಗ್ಯ ಕವಚ"ದ ಮೂಲಕ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ನಂಜನಗೂಡು ತಾಲ್ಲೂಕಿಗೆ 108 ಆರೋಗ್ಯ ಕವಚ ಉಚಿತ ಸೇವೆ ವಾಹನ ಮತ್ತು ಸಿಬ್ಬಂದಿಗಳನ್ನು ನೀಡಿದ್ದು ಅಲ್ಲಿನ ಸಿಬ್ಬಂದಿ ವರ್ಗದವರು ಕಾಲೇಜಿಗೆ ಆಗಮಿಸಿ ಸದರಿ ಸೇವೆಯ ಬಗ್ಗೆ ಎಲ್ಲ ವಿದ್ಯಾರ್ಥಿ ಗಳಿಗೂ ವಿವರ ನೀಡಿದರು. ಜೊತೆಗ ಆ 108 ವಾಹನದಲ್ಲಿನ ಸೌಲಭ್ಯ ಮತ್ತು ಸಲಕರಣೆಗಳ ಬಗ್ಗೆ ಪ್ರಾತ್ಯಕ್ಷಿಕೆ ಯನ್ನು ತೋರಿಸಿಕೊಟ್ಟರು.

ದಿನಾಂಕ 25.6.2009 ರಂದು ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಶ್ರೀ ಲಕ್ಷ್ಮಣತೀರ್ಥ ಪರಿಸರ ಸಂರಕ್ಷಣಾ ಸಂಸ್ಥೆಯ ಉಪನ್ಯಾಸಕರಾದ ಶ್ರೀ ಟಿ.ಸಿ. ದೇವನಾಥ್ ರವರು ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಉಪನ್ಯಾಸ ನೀಡಿದರು. ಪರಿಸರದ ಬಗೆಗಿನ ಸಾಹಿತ್ಯ, ಪರಿಸರ ಪ್ರಜ್ಞೆಯನ್ನು ಸಾರುವ ಉಕ್ತಿಗಳು, ಮಾನವನ ಮತ್ತು ಪರಿಸರದ ಸಂಬಂಧ ಇತ್ಯಾದಿ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

### ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆ, ಮಾಲೂರು



ಕರ್ನಾಟಕ ರಾಜ್ಯೋತ್ಸವ ಪುರಸ್ಕೃತರಾದ ಶ್ರೀ ಆರ್.ಎನ್. ಜ್ಞಾನಮೂರ್ತಿಯವರು ದಿನಾಂಕ 26.6.2009 ರಂದು ಜಗಜ್ಯೋತಿ ಬಸವೇಶ್ವರರ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನೀಡಿದರು. ಬಸವಣ್ಣನವರ ಜೀವನದ ತತ್ವ, ಸಿದ್ಧಾಂತಗಳನ್ನು ಅನೇಕ ದೃಷ್ಟಾಂತಗಳ ಮೂಲಕ ಮಕ್ಕಳಿಗೆ ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ದೊರೆಸ್ವಾಮಿಯವರು ವಹಿಸಿದ್ದರು.

## ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಮೈಸೂರು



ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಪ್ರಣವ ಯೋಗ ಮಂದಿರದ ಸಹಯೋಗದಲ್ಲಿ ದಿನಾಂಕ 5.6.2009 ರಂದು ಧೂಮಪಾನದ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಚಾಮುಂಡಿಪುರಂ ವೃತ್ತ ಮತ್ತು ಜೆ.ಪಿ. ನಗರದ ಗೊಬ್ಬಳಿಮರದ ವೃತ್ತದಲ್ಲಿ ಬೀದಿನಾಟಕ ಪ್ರದರ್ಶಿಸಲಾಯಿತು. ಸದರಿ ನಾಟಕ ಪ್ರದರ್ಶನವನ್ನು ಪ್ರಣವಯೋಗ ಮಂದಿರದ ಮುಖ್ಯಸ್ಥರಾದ ಶ್ರೀ ಶ್ರೀಧರ್ ಉದ್ಘಾಟಿಸಿದರು. ಜೆಎಸ್‌ಎಸ್ ಶುಶ್ರೂಷಾ ಶಾಲೆಯ ವಿದ್ಯಾರ್ಥಿಗಳು ಧೂಮಪಾನದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಒಂದು ಕಿರುನಾಟಕವನ್ನು ಪ್ರದರ್ಶಿಸಿದರು. ಸುಮಾರು 100 ಕ್ಕೂ ಹೆಚ್ಚಿನ ಸಾರ್ವಜನಿಕರು ಈ ನಾಟಕವನ್ನು ಆಸಕ್ತಿಯಿಂದ ವೀಕ್ಷಿಸಿ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

## ಜೆಎಸ್‌ಎಸ್ ನರ್ಸರಿ ಮತ್ತು ಹಿರಿಯ ಪ್ರಾಥಮಿಕ ಶಾಲೆ ಸರಗೂರು, ಎಚ್.ಡಿ. ಕೋಟೆ ತಾಲ್ಲೂಕು



ಶಾಲೆಯಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಶಾಲೆಯಿಂದ ಕು. ಎಸ್.ಸಿ. ಕಾವ್ಯ ಎಂಬ ವಿದ್ಯಾರ್ಥಿನಿಯು ಹೆಚ್ಚು ಅಂಕ ಗಳಿಸಿ ಜವಹರ್ ನವೋದಯ ವಿದ್ಯಾಲಯಕ್ಕೆ ಆಯ್ಕೆಯಾಗಿರುತ್ತಾಳೆ.

## ಜೆಎಸ್‌ಎಸ್ ಸಂಯುಕ್ತ ಪದವಿಪೂರ್ವ ವಿದ್ಯಾಲಯ (ಪ್ರೌಢಶಾಲಾ ವಿಭಾಗ), ಜಯನಗರ, ಬೆಂಗಳೂರು

ಮಾರ್ಚ್ 2009 ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಯಿಂದ 172 ವಿದ್ಯಾರ್ಥಿಗಳು ಹಾಜರಾಗಿದ್ದು, ಅವರ ಪೈಕಿ 125 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡ 73% ರಷ್ಟು ಫಲಿತಾಂಶ ಲಭಿಸಿದೆ. ಇದರಲ್ಲಿ 6 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಅವರ ವಿವರಗಳು ಹೀಗಿವೆ :



ರಂಜಿತ್ ಕೆ.ಎನ್.
570 ಶೇ.91.20



ರುಚಿಕಾ ಮಿತ್ತಲ್
566 ಶೇ.90.56



ಪೂಜಾ ಪ್ರವೀಣ್
550 ಶೇ.88.00



ಪಲ್ಲವಿ ಡಿ.ಕೆ.
544 ಶೇ.87.04



ಮಂಜುನಾಥ್ ವಿ.
535 ಶೇ.85.60



ವೆಂಕಟೇಶ್ ಎಸ್.
526 ಶೇ.84.16

## ಜೆಎಸ್‌ಎಸ್ ಕಲಾಮಂಟಪ ರಂಗ ಕಾರ್ಯಾಗಾರ ಸುತ್ತೂರು

ದಿನಾಂಕ 7.6.2009 ರಂದು ಶ್ರೀ ಪ್ರಸನ್ನ ಅವರ ಪ್ರಾಸ್ತಾವಿಕ ನುಡಿಯಿಂದ ಸುತ್ತೂರಿನಲ್ಲಿ ಕಾರ್ಯಾಗಾರದ ಉದ್ಘಾಟನೆ ನಡೆಯಿತು. ರಂಗಭೂಮಿಯಿಂದ ಆಗುವ ಸಾಮಾಜಿಕ ಬದಲಾವಣೆಯ ಬಗ್ಗೆ ಅವರು ಮಾತನಾಡಿದರು. ಅನಂತರ ಶ್ರೀ ಎಸ್.ಆರ್. ರಮೇಶ್ ಮತ್ತು ಶ್ರೀ ಎಚ್.ಎಸ್. ಉಮೇಶ್‌ರವರು 'ಸಂವಹನ ಕೌಶಲಗಳು' ಎಂಬ ವಿಚಾರದ ಬಗ್ಗೆ ಮಾತನಾಡಿದರು. ಅಂದು ಮಧ್ಯಾಹ್ನ 2.30 ರಿಂದ ಸಂಜೆ 5.00 ರವರೆಗಿನ ಕ್ಲಾಸ್‌ನಲ್ಲಿ ಶಿಬಿರಾರ್ಥಿಗಳನ್ನು ಎರಡು ಗುಂಪು ಮಾಡಲಾಯಿತು. ಒಂದು ಗುಂಪಿಗೆ ಶ್ರೀ ಎಸ್.ಆರ್. ರಮೇಶ್ ಮತ್ತು ಮತ್ತೊಂದು ಗುಂಪಿಗೆ ಜನಾರ್ದನ (ಜನ್ನಿ) ಅವರು ಮುಖಂಡರಾಗಿದ್ದರು. ನಾಟಕಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು.

ದಿನಾಂಕ 8.6.2009 ರಂದು ಡಾ. ಕೆ. ಮರುಳಸಿದ್ದಪ್ಪನವರು ಕನ್ನಡ ರಂಗಪರಂಪರೆಯ ಬಗ್ಗೆ ಮಾತನಾಡಿದರು. ಕವಿರಾಜ ಮಾರ್ಗದಿಂದ ಪ್ರಾರಂಭ ಮಾಡಿ ಕನ್ನಡದ ಮೊದಲ ನಾಟಕದ ಬಗ್ಗೆ ಮತ್ತು ಕನ್ನಡ ರಂಗಪರಂಪರೆ ಬೆಳೆಯುತ್ತ ಬಂದ ಬಗ್ಗೆಯನ್ನು ವಿವರಿಸಿದರು. ಅಂದು ಮಧ್ಯಾಹ್ನ 2.30 ರಿಂದ 5.00 ಗಂಟೆಯ ತರಗತಿಯನ್ನು ಶ್ರೀ ಕೃಷ್ಣಪ್ರಸಾದ್ (ಇಂಗ್ಲಿಷ್ ಅಧ್ಯಾಪಕರು,

ಸದ್ವಿದ್ಯಾ ಶಾಲೆ) ನಡೆಸಿ, ಶಾಲೆಯಲ್ಲಿ ಮಕ್ಕಳಿಗೆ ಆಡಿಸಬಹುದಾದಂತಹ ನಾಟಕಗಳ ಬಗ್ಗೆ ತಿಳಿಸಿಕೊಟ್ಟರು.

ದಿನಾಂಕ 9.6.2009 ರಂದು ಡಾ. ನ. ರತ್ನರವರು ಧ್ವನಿಶಾಸ್ತ್ರದ ಬಗ್ಗೆ ಮಾತನಾಡಿದರು. ನಾಟಕದಲ್ಲಿ ಮಾತಿಗೂ, ವಸ್ತುವಿಗೂ ಇರುವ ಸಂಬಂಧ, ಧ್ವನಿಯ ಬಳಕೆಯನ್ನು ಹೇಗೆ ಮಾಡಬೇಕು. ಪಾತ್ರಕ್ಕನುಗುಣವಾದ ಧ್ವನಿಯ ಬಳಕೆಯ ಬಗ್ಗೆ ತಿಳಿಸಿದರು. ಅಂದು ಮಧ್ಯಾಹ್ನ ಶ್ರೀ ಶಿವಾಜಿರಾವ್ ಜಾಧವ್ ಅವರಿಂದ ರಂಗಸಂಗೀತದ ಪ್ರಾತ್ಯಕ್ಷಿಕೆ ನಡೆಯಿತು. ಕಂಪನಿ ನಾಟಕಗಳ ಹಾಡಿನಿಂದ ಇಂದಿನ ರಂಗಭೂಮಿಯ ರಂಗಸಂಗೀತದವರೆಗೆ ಹಲವಾರು ರೀತಿಯ ಹಾಡುಗಳನ್ನು ಹಾಡಿದರು. ರಂಗಸಂಗೀತ ಎಂದರೇನು, ರಂಗಸಂಗೀತಕ್ಕೂ ಶಾಸ್ತ್ರೀಯ ಸಂಗೀತಕ್ಕೂ ಇರುವ ವ್ಯತ್ಯಾಸವೇನು ಎಂಬುದನ್ನು ವಿವರವಾಗಿ ತಿಳಿಸಿದರು. ಅಂದು ಸಂಜೆ ಶ್ರೀ ಗಂಗಾಧರಸ್ವಾಮಿಯವರು "ತುಟಿ ಉಬ್ಬಿಸಿ ಶಿಳ್ಳೆ ಹಾಕುವುದು" ಮಕ್ಕಳ ನಾಟಕವನ್ನು ಓದಿದರು.

ದಿನಾಂಕ 14.6.2009 ರಂದು ತಾಲೀಮು ನಡೆಯಿತು. ಮಧ್ಯಾಹ್ನ 12 ಗಂಟೆಗೆ ಪ್ರದರ್ಶನ ಎಂದು ಪ್ರಕಟಿಸಲಾಗಿತ್ತು. ಅದರಂತೆ 12 ಗಂಟೆಗೆ ಸುತ್ತೂರಿನ ಶಾಲೆಯ ಮಕ್ಕಳು ಎಲ್ಲರೂ ಹಾಜರಿದ್ದರು. ಮೊದಲು ರಂಗಗೀತೆಗಳನ್ನು ಹಾಡಲಾಯಿತು. ಮೊದಲಿಗೆ ಒಂದು ಗುಂಪಿನ ಕಿರುನಾಟಕ "ಜೋಗಿ" ಪ್ರದರ್ಶನವಾಯಿತು. ಅನಂತರ ಮತ್ತೊಂದು ಗುಂಪಿನ ಕಿರುನಾಟಕ "ಕತ್ತಲೆ ರಾಜ್ಯ" ಪ್ರದರ್ಶನವಾಯಿತು.

### ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆ
### ಸರಸ್ವತಿಪುರಂ, ಮೈಸೂರು




2008-09ನೇ ಸಾಲಿನಲ್ಲಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ನಡೆಸಿದ ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ಸ್ಕಾಲರ್‌ಶಿಪ್ ರಾಷ್ಟ್ರೀಯ ಪ್ರತಿಭಾನ್ವೇಷಣ ಪರೀಕ್ಷೆಯಲ್ಲಿ ಶಾಲೆಯ ಕೆಳಕಂಡ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇವರಿಗೆ ತಲಾ 500 ರೂ.ಗಳ ವಿದ್ಯಾರ್ಥಿವೇತನ ದೊರೆಯಲಿದೆ.

1. ಎಸ್. ಮೇಘನಾ, 2. ಟಿ. ಭುವನೇಶ್ವರಿ, 3. ಪಿ.ವಿ. ಭಾವನಾ, 4. ಆರ್. ಮಹಾದೇವಿ, 5. ಬಿ.ಕೆ. ಮೋಹನಕುಮಾರಿ, 6. ಎನ್. ರಶ್ಮಿ, 7. ಎಂ. ಸಹನ, 8. ಜುಂಜಪ್ಪ ದೊಡ್ಡಮನಿ, 9. ಪಿ. ಸಚಿನ್, 10. ಕೆ.ಎನ್. ಸಚಿನ್, 11. ಶಶಿಧರ್, 12. ಕೆ. ಶ್ರೀನಿವಾಸರಾವ್, 13. ಜೆ. ಸುಮಂತ್

### ಜೆಎಸ್‌ಎಸ್ ಪ್ರೌಢಶಾಲೆ
### ಲಕ್ಷ್ಮೀಪುರಂ (ರಾಮಾನುಜ ರಸ್ತೆ), ಮೈಸೂರು

ನವೆಂಬರ್ 2008 ರಲ್ಲಿ ನಡೆದ ನ್ಯಾಷನಲ್ ಮೀನ್ಸ್ ಕಮ್ ಮೆರಿಟ್ ಸ್ಕಾಲರ್‌ಶಿಪ್ ರಾಷ್ಟ್ರೀಯ ಪ್ರತಿಭಾನ್ವೇಷಣ ಪರೀಕ್ಷೆಯಲ್ಲಿ ಶಾಲೆಯ ಹನ್ನೊಂದು ಜನ ವಿದ್ಯಾರ್ಥಿಗಳು ಆಯ್ಕೆಯಾಗುವುದರ ಮೂಲಕ ಉತ್ತಮ ಸಾಧನೆಗೈದಿದ್ದಾರೆ. ಆ ವಿದ್ಯಾರ್ಥಿಗಳ ಹೆಸರುಗಳು ಹೀಗಿವೆ:



1. ಎಂ.ಎನ್. ಕಿಶೋರ್, 2. ವಿ. ಪ್ರಶಾಂತ್, 3. ಮಿಲನ್ ಬಿ. ಶೆಟ್ಟಿ, 4. ಎಂ.ಕೆ. ರೋಹಿತ್ ರಾಜ್, 5. ಸಿ.ಕೆ. ಅಭಿಷೇಕ್ 6. ಕೆ.ಎಂ. ಚನ್ನಬಸವ ಶಿವಾಚಾರ್ಯ, 7. ಎಂ. ಕಾರ್ತಿಕ್, 8. ಡಬ್ಲ್ಯು. ಎಂ. ರಕ್ಷಿತ್, 9. ಜಿ. ಮಹೇಂದ್ರ, 10. ಆರ್. ಚಂದನ್, 11. ನಂದೀಶ್

ಈ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರವು ಮಾಹೆಯಾನ ತಲಾ 500 ರೂ.ಗಳಂತೆ ನಾಲ್ಕು ವರ್ಷಗಳ ಕಾಲ ವಿದ್ಯಾರ್ಥಿವೇತನ ನೀಡಲಿದೆ.

# ಶ್ರಾವಣ ಮಾಸದ ಪ್ರವಚನ

## ಮೈಸೂರಿನಲ್ಲಿ

ವ್ಯಕ್ತಿಗಳ ಮಾನಸಿಕ ಶಾಂತಿಯಿಂದ ಮಾತ್ರ ವಿಶ್ವಶಾಂತಿ ಸಾಧ್ಯ. ಇದಕ್ಕೆ ಧರ್ಮ, ದೇವರು ಸಂತರು, ಶರಣರು, ಸಾಧಕರ ವಿಚಾರಗಳ ಶ್ರವಣ , ಮನನ ಮತ್ತು ಅನುಸರಣೆ ಮುಖ್ಯ. ಧರ್ಮವು ಮಾನವ ಜನಾಂಗದ ಅಮೃತ. ಇದು ಜೀವಾತ್ಮನನ್ನು ಪರಮಾತ್ಮನನ್ನಾಗಿ ಮಾಡುತ್ತದೆ. ಪಶುತ್ವದಿಂದ ಮಾನವತೆಗೆ, ಮಾನವತೆಯಿಂದ ದಿವ್ಯತೆಗೆ ಮಾನವನನ್ನು ಕೊಂಡೊಯ್ಯುವುದೇ ಧರ್ಮ ಎಂದು ಮೈಸೂರು ಜಿಲ್ಲಾ ಅಪರ ಜಿಲ್ಲಾಧಿಕಾರಿಗಳಾದ ಡಾ. ಸಿ.ಜಿ. ಬೆಟ್‌ಸೂರ್‌ಮಠ್‌ರವರು ತಿಳಿಸಿದರು.

ಮೈಸೂರು ಶ್ರೀ ಸುತ್ತೂರುಮಠದಲ್ಲಿ ಶರಣತತ್ವ ಪ್ರಚಾರ ಸಮಿತಿಯ ಆಶ್ರಯದಲ್ಲಿ ದಿನಾಂಕ 23.7.2009 ಗುರುವಾರ ದಂದು ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿ, "ಇಂದು ಮಾನವೀಯತೆ ದೂರವಾಗಿ ಮೃಗೀಯ ವರ್ತನೆ ಹೆಚ್ಚಾಗುತ್ತಿದೆ. ಸಂಸ್ಕೃತಿ ಹಾಳಾಗಿ ಹೋಗಿದೆ. ಸುಸಂಸ್ಕೃತರ ಅಭಾವ ಎದ್ದು ಕಾಣುತ್ತಿದೆ" ಎಂದರು.

"ಮಾತಿನ ಮೋಡಿಯಲ್ಲಿ ಜನರನ್ನು ಮರುಳು ಮಾಡುವ ಕಾರ್ಯ ಮಾತ್ರ ನಡೆಯುತ್ತಿದೆ. ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿಷಮ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲೆಲ್ಲೂ ಪರಸ್ಪರ ದ್ವೇಷ-ಅಸೂಯೆ, ಅಸಮಾಧಾನ, ಅತ್ಯಾಚಾರಗಳು ನಡೆಯುತ್ತಿದ್ದು, ಸಮಾಜ ಛಿದ್ರಛಿದ್ರವಾಗುತ್ತಿದೆ. 21ನೇ ಶತಮಾನವು ಅನೇಕ ವಿಪರೀತಗಳ ಕಾಲಮಾನವಾಗಲಿದ್ದು, ಜಾಗತಿಕ ತಾಪಮಾನವು ವಿಶ್ವವ್ಯಾಪಿ ಸಮಸ್ಯೆಯಾಗಲಿದೆ. ನೀರಿನ ಕೊರತೆ, ವ್ಯಾಪಕ ಬರಗಾಲ, ರೋಗರುಜಿನಗಳು, ತೀವ್ರ ಬಡತನ ಇವುಗಳಿಂದ ಈ ಶತಮಾನ ಒಂದು ಅಂಧಕಾರದ ಯುಗವಾಗ ಬಹುದು" ಎಂದು ಡಾ. ಸಿ.ಜಿ. ಬೆಟ್‌ಸೂರ್‌ಮಠ ರವರು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಂಜನಗೂಡಿನ ಶ್ರೀ ರಾಮಚಂದ್ರ ಪಿರಮಿಡ್ ಮೆಡಿಟೇಷನ್ ಫೌಂಡೇಷನ್‌ನ ಶ್ರೀ ಸಿ.ವೈ.ಎನ್.ಮೂರ್ತಿಯವರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯ ಮಾತನಾಡಿ "ಒಳ್ಳೆಯದನ್ನು ಮಾಡುವ ಯೋಗ್ಯತೆ ಇಲ್ಲದವರು ಕೆಟ್ಟದ್ದನ್ನು ಏಕೆ ಮಾಡಬೇಕು? ನಮ್ಮ ಹೃದಯ ಹಾಗೂ ನಾಲಿಗೆಗಳು ಶುದ್ಧಿಯಾಗಿರಬೇಕು. ಬದುಕಿನಲ್ಲಿ ನಂಬಿಕೆ ಬಹು ಮುಖ್ಯ" ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರು "ಒಳ್ಳೆಯ ವಿಚಾರ ಗಳನ್ನು ಕೇಳುವವರು ಸಾಕಷ್ಟಿದ್ದಾರೆ. ಆದರೆ ಒಳ್ಳೆಯ ಕೆಲಸ ಮಾಡುವವರ ಸಂಖ್ಯೆ ಕಡಿಮೆ. ಸದ್ವಿಚಾರಗಳ ಪ್ರಸಾರದಿಂದ ಸಮಾಜದಲ್ಲಿ ಪರಿವರ್ತನೆ ತರುವುದು ಸಾಧ್ಯ. ಶರಣರ ವಿಚಾರಧಾರೆಯ ಮಹತ್ವ ಅನನ್ಯವಾದುದು" ಎಂದು ನುಡಿದರು.

ಶ್ರಾವಣಮಾಸದ ಅಂಗವಾಗಿ ಒಂದು ತಿಂಗಳ ಕಾಲ ಏರ್ಪಡಿಸಿರುವ ವಚನ ವ್ಯಾಖ್ಯಾನ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಸದ್ವಿದ್ಯಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಎನ್.ಕೆ. ರಾಮಶೇಷನ್‌ರವರು ಮೊದಲನೆಯ ದಿನದ ಕಾರ್ಯಕ್ರಮ ನಡೆಸಿಕೊಟ್ಟರು. ಜೆಎಸ್‌ಎಸ್ ಗುರುಕುಲದ ಸಾಧಕರಾದ ಶ್ರೀ ಕುಮಾರದೇವರು ವಚನಗಳನ್ನು ಹಾಡಿದರು.

ಮೈಸೂರು ಹೊಸಮಠದ ಶ್ರೀ ಚಿದಾನಂದ ಸ್ವಾಮಿಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್.ಬೆಟ್‌ಕೆರೂರ್, ಉಪ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್, ಆಡಳಿತಾಧಿಕಾರಿಗಳಾದ ಶ್ರೀ ಕೆ.ಎಂ. ನಾಗಣ್ಣಾಚಾರ್, ಪ್ರಕಟಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಮ.ಗು. ಸದಾನಂದಯ್ಯ ನವರು ಮತ್ತು ಶ್ರೀ ಆರ್.ಎಸ್. ಪೂರ್ಣಾನಂದರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಗುರುಕುಲದ ಸಾಧಕರಿಂದ ಸಾಮೂಹಿಕ ಪ್ರಾರ್ಥನೆ ನಡೆಯಿತು. ಚುಂಚನಹಳ್ಳಿ ಹಾಗೂ ನವಿಲೂರು ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮಿಗಳು ಸ್ವಾಗತಿಸಿದರು. ಶ್ರೀ ಕೀರ್ತಿಪ್ರಭುಸ್ವಾಮಿಗಳು ವಂದಿಸಿದರು. ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀ ಚನ್ನಬಸಪ್ಪನವರು ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರು ಶ್ರೀಕ್ಷೇತ್ರದಲ್ಲಿ

ಸುತ್ತೂರು ಶ್ರೀಮಠದ ಆಶ್ರಯದಲ್ಲಿ ಶ್ರಾವಣ ಮಾಸದಾದ್ಯಂತ ನಡೆಯುವ ಪ್ರವಚನ ಕಾರ್ಯಕ್ರವನ್ನು ದಿನಾಂಕ 22.7.2009 ರಂದು ಮೈಸೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಡಿ.ಎಸ್. ವಿಶ್ವನಾಥ್

ರವರು ಉದ್ಘಾಟಿಸಿದರು. ಶ್ರಾವಣಮಾಸದಲ್ಲಿ ಆಲಿಸುವ ಒಳ್ಳೆಯ ಆಚಾರ ವಿಚಾರಗಳು, ಶ್ರವಣ, ಸತ್ಸಂಗ, ಕೀರ್ತನ, ಸ್ಮರಣಗಳಿಂದ ಮನಸ್ಸಿನಲ್ಲಿ ಶಾಂತಿ ಲಭಿಸುತ್ತದೆ. ಜ್ಞಾನಸಂಪಾದನೆಯಿಂದ ಧೈರ್ಯ, ದೃಢತೆ, ಸಂಕಲ್ಪ ಸಿದ್ಧಿಸುತ್ತದೆ. ಅದರಿಂದ ಯಾವುದೇ ಸಂಕಷ್ಟಗಳನ್ನು ಎದುರಿಸಬಹುದೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದ ಮಲ್ಲನ ಮೂಲೆ ಮಠದ ಶ್ರೀ ಚೆನ್ನಬಸವಸ್ವಾಮಿಗಳವರು, "ಹಳ್ಳಿಗರ ಮನಸ್ಸು ಸದಾ ಒಗ್ಗಟ್ಟಿನಿಂದಿರಬೇಕು. ಸಮಸ್ಯೆಗಳು ಹಾಗೂ ಕಲ್ಮಷಗಳನ್ನು ದೂರ ಮಾಡಿಕೊಂಡು ಮುನ್ನಡೆಯಬೇಕು. ಶರಣರ ವಿಚಾರಗಳನ್ನು ನಮ್ಮ ಬದುಕಿಗೆ ದಾರಿದೀಪವಾಗಿಸಿ ಕೊಳ್ಳಬೇಕು." ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ಸ್‌ನ ಅಧ್ಯಕ್ಷರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ನವರು ಮಾತನಾಡಿ, ಅನೇಕ ಲೋಕಕಲ್ಯಾಣ ಕಾರ್ಯಗಳನ್ನು ನಡೆಸುತ್ತಿರುವ ಸುತ್ತೂರು ಶ್ರೀಮಠವು ಶರಣರ ವಿಚಾರಧಾರೆಯನ್ನು ಪೂರ್ಣ ಪ್ರಮಾಣದಲ್ಲಿ ಆಚರಣೆಗೆ ತಂದಿದೆಯೆಂದು ಸಂತಸ ವ್ಯಕ್ತಪಡಿಸಿದರು.

ಮತ್ತೋರ್ವ ಅತಿಥಿಗಳಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಉಪಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್ ರವರು ಮಾತನಾಡಿ, "ಪ್ರಕೃತಿಯಿಂದಲೇ ಜೀವನ, ಅದರಿಂದಲೇ ಸಂತೃಪ್ತಿ. ಹೆತ್ತ ತಂದೆತಾಯಿಗಳ ಮಾತನ್ನೇ ಮಕ್ಕಳು ಆಲಿಸದ ಅಪಾಯದ ಮಟ್ಟಕ್ಕೆ ಸಮಾಜ ತಲುಪಿದೆ. ಸುಲಭವಗಿ ಹಣ ಸಂಪಾದಿಸುವ ಮಾರ್ಗದತ್ತ ಮುಖಮಾಡದೆ ಶರಣರ ಕಾಯಕ ತತ್ವವನ್ನು ಅಳವಡಿಸಿಕೊಳ್ಳಬೇಕಿದೆ. ಮಾನವ ಮಾನವನನ್ನು ಪ್ರೀತಿಸುವಂತಾದರೆ ಯಾವುದೇ ಸಮಸ್ಯೆಗಳು ಸೃಷ್ಟಿಯಾಗುವುದಿಲ್ಲ" ಎಂದರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಉಪ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿಗಳವರು ಸಹ ಉಪಸ್ಥಿತರಿದ್ದರು.

'ಬಸವಣ್ಣನವರ ವಿಚಾರಧಾರೆ' ಎಂಬ ವಿಷಯ ಕುರಿತು ಮೈಸೂರಿನ ಜೆಎಸ್‌ಎಸ್ ಗುರುಕುಲದ ಸಾಧಕರಾದ ಶ್ರೀ ಮಹಾಂತದೇವರು ಮಂಗಳಗಟ್ಟಿಯವರು ಪ್ರವಚನ ನಡೆಸಿ ಕೊಟ್ಟರು. ಸಂಗೀತ ಶಿಕ್ಷಕರಾದ ವಿದ್ವಾನ್ ಶ್ರೀ ವೆಂಕಟರಮಣ ಪಿ. ಹೆಗಡೆಯವರು ವಚನಗಾಯನ ಮಾಡಿದರು.



ಮೈಸೂರಿನ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ದಿನಾಂಕ 5.6.2009 ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು

# JSS MEDICAL COLLEGE, MYSORE

## DEPARTMENT OF PULMONARY MEDICINE

### Silver Jubilee CME on Pulmonology

A day-long State Level CME in Pulmonology was conducted on 14.7.2009 at Sri Rajendra Auditorium, JSS Medical College Hospital by the Department of Pulmonary Medicine, to celebrate the Silver Jublee of JSS Medical College. The JSS Medical College, since its inception in 1984, has grown by leaps and bounds and has rcently attained the "Deemed University" status. The Silver Jubilee Oration was delivered by Dr. S.K. Jindal, Professor and Head, Department of Pulmonary Medicine and Critical Care, PGIMER, Chandi garh, one of the leading figures in the field of Pulmonary Medicine in India, on "Interstitial Lung Diseases". He spoke on the alarming rise in the burden of ILD's, a broader spectrum of presentation, difficulties in the confirmatory test for diagnosis and limitations in its treatment. Dr. K.S. Sathish, a leading Chest Physician and a specialist in HIV from Wockhardt Hospital, Bangalore, spoke on the opportunistic infections related to HIV in the lungs, Dr. Ravi Mehta on latest frontiers in Interventional Bron choscopy, Dr. S. Chandrashekar and Dr. Dharmanand deliberated on rheumatological manifestations in the lungs. Dr. Jindal also highlighted the threat of multidrug resistant tuberculosis in India and ways to detect and combat the dreaded disease. Earlier, the Silver Jubilee CME was inaugurated by Sri B.N. Betkerur, Pro-Chancellor of JSS University, and presided by Dr. H. Basavanagowdappa, Principal, JSS Medical College. The Guests of Honour were Dr. K. Veerabhadrappa, Medical Superintendent, JSS Medical College Hospital and Dr. M.D. Ravi, Vice-Principal, JSS Medical College. Dr. B.S. Jayaraj, Head of the Department of Pulmonary Medicine, delivered the Vote of Thanks.

**JSS INSTITUTE OF EDUCATION MYSORE**



The University of Mysore has nominated Miss C.D. Geetha, a meritorious student of this College with leadership skills as a Member of the Academic Council under the 'student quota'. She is now studying in 3rd year B.Sc.Ed. The tenure of her membership is two years.

## DEPT. OF FORENSIC MEDICINE

### A Brief Report on FITCON-2009 CME & Medico-Legal Workshop



The Department of Forensic Medicine of the College organized "FITCON-2009", CME and Medico Legal Workshop on 27.6.2009 in connection with the Silver Jubilee of JSS Medical College. The CME was well-attended by more than 200 delegates who were Forensic Experts, Police Officers, Medical Officers, Lawyers and Advocates from different parts of the State.

The CME was inaugurated by Mr. Ashit Mohan Prasad, IGP & Director, Karnataka Police Academy. All the delegates and the guests were welcomed by Dr. M. Arun, Organizing Secretary of FITCON-2009. Later, a Posters Manual was released by Principal of JSS Medical College, Dr. H. Basavannagowdappa.The inauguration programme concluded by a Vote of Thanks by Dr. H.V. Chandrakanth, Organizing Secretary of FITCON-2009.

The inauguration function was followed by a series of Guest Lectures delivered by senior faculty members on topics of medico-legal importance. This was followed by a skit" Court Room Simulation" enacted by the undergra duate students of JSS Medical College.

In the post-lunch session, a Panel Discussion was held which was attended by the Principal, JSS Medical College, Mr. Sudeep Bangera, Public Prosecutor, Mysore, Mr. Jeevan Kumar Gaonkar, IGP, Southern Range, Mr. Ashwin Kumar Joshi, Senior Advocate, Mr. Nanjundappa, Deputy Director of RFSL, Mysore, Dr. Geetha Avadhani, Medical Superin-tendent, Mysore Medical College & Research Institute and Dr. T.N. Chandra shekar, Professor & Head, Department of Forensic Medicine, Mysore Medical College & Research Institute, Mysore. Dr. G. Pradeep Kumar, Professor & Head of the Dept. of Forensic Medicine, Kasturba Medical College, Manipal, was the Moderator of the Panel Discussion.

The CME concluded with a valedictory function presided by Dr. P.

A. Kushalappa, Deputy Registrar, JSS University and a Vote of Thanks by Dr. B.M. Balaraj, Organizing Chairman of FITCON-2009 and Professor & Head of Forensic Medicine, JSS Medical College, Mysore.

## DEPARTMENT OF MEDICINE

### A Brief Report on CME on Thyroid Disorders

A CME programme on Thyroid Disorders was conducted on the 27.6.2009 at Sri Rajendra Auditorium of JSS Hospital, Mysore, as part of year-long academic activities to commemorate Silver Jubilee Celebrations of JSS Medical College, Mysore.

The programme started with welcome by Dr. K.M. Srinath, Associate Professor of Medicine, JSS Medical College. He reminded the importance of great visionaries, late Jagadguru Sri Shivarathri Rajendra Mahaswamiji and the Present President, Jagadguru Sri Shivarathri Deshikendra Mahaswamiji and offered sincere *pranams* to them for their vision, encouragement and support in this academic journey.

Dr. K.A. Sudarshana Murthy, Professor & Head, Department of Medicine delivered the welcome address and stressed about the importance of CME, gave an introduction to the topic and requested Dr. H. Basavanagowdappa, Principal to declare the session open and to deliver the keynote address. In his address, the Principal recalled the journey of JSS Medical College towards the Silver Jubilee and also thanked the founders for their vision and unstinted support towards the college. This was followed by the CME programme.

The CME programme had a series of guest lectures from reputed faculty in the field of Endocrinology and Thyroid Disorders. The guest speakers were Dr. Aneesh Behl, Consultant Endocrinologit, Apollo BGS Hospital, Mysore, Dr. Rajarajeshwari Janakiraman, Consultant Endocrinologist,Columbia Asia Hospital, Bangalore, Dr. Ganesh, Consultant Endocrinologist, A.J. Hospital, Mangalore and Dr. G. Siddesh, Professor & Head, Department of Surgery , JSS Medical College. The experts spoke on Thyroid emergencies, Thyroid disorders in pregnancy, Sub-clinical hypothyroidism and approach to multinodular goitre.

The CME was well-attended by the staff, postgraduate students and internees of various Departments. Following the lectures, there was an

interactive session where all the participants participated enthusia stically. The programme ended with a Vote of Thanks by Dr. K.C. Shashidhar, Associate Professor of Medicine, JSS Medical College, Mysore. The Programme was sponsored by M/s. Abbottt India Ltd.

□

## JSS VARSITY SIGNS MOU

Jagadguru Sri Shivarathreeshwara University (JSSU), Mysore, and AlfaGene Biosciences (AGB), USA, a biomedical and biotechnology focused organization, signed a Memorandum of Understanding on 16.7.2009 at New Jersey, USA, agreeing to "explore opportunities for co-operation and collaboration with each other in the field of biotechnology and research related work".

The Memorandum's purpose is to create a shared programme for human adult stem cell treatment research and applications, initially focusing on personalised medicine and regenerative therapy for chronic inflammatory diseases and cancers of he gastrointestinal tract such as Crohn's Disease, Ulcerative Colitis, and Colon Cancer.

The Vice-Chancellor of JSS University Dr. B. Suresh signed this MOU along with AlfaGene's CSO, Dr. Asit Panja, while visiting AlfaGene's Stem Cell Research Facility in Somerset, New Jersey. Sri Sreedhar Venkatraman, Controller of AlfaGene, Sri Ashish Mahajan from Business Development Department of AlfaGene. Dr. Muthusamy Shanmugam, Ph.D, JSSU alumnus and Dr. Satish Palaniappan, Ph.D, also a JSS University alumnus, were present.

□

## Applications invited for JSS Senior Citizens Home

For the benefit of the elderly, JSS Mahavidyapeetha has opened a home for the senior citizens at Suttur village in Nanjangud taluk. Well-furnished rooms, library, dining hall and entertainment facilities have been provided. Interested senior citizens who are healthy, aged more than 60 years and seeking a peaceful life at the home, can submit the application forms. For details, contact the Deputy Secretary-2, JSS Mahavidyapeetha, Mysore, on Phone: 2548201 or the Co-ordinator at JSS Institutions, Suttur or the Manager, JSS Home for Senior Citizens, Suttur or call 08221-232217, 232059, 9740123122.

## A PROFILE :
## JSS PUBLIC SCHOOL, SIDDHARTHANAGAR, MYSORE



Jagadguru Sri Shivarathreeshwara Mahavidya Peetha (JSSMVP) was founded by Jagadguru Sri Veera saimhasna Mahasamsthana Matha (Suttur) in 1951. The first CBSE School was started as far back as 1991, in Siddharthanagar, Mysore, seeing the need for a quality CBSE School in Mysore city. Now there are 20 CBSE Public Schools in Mysore city on the pattern of this School. In Mysore, we have three JSS Public Schools, one in Siddharthanagar, one in JP Nagar and another in JSS Technical Institutions Campus. We have nine more JSS Public Schools, we have started one in Ooty, three in Bangalore, one in Malur, one in Sakaleshapur and, this year, we have started one in Hoovinadagali, one in Dharwad and one in a foreign country, Dubai. Another is coming up very shortly, in NOIDA (Delhi). May its tribe increase!

The JSS School at Siddharthanagar aims at total personality development of the young students. This is achieved through rigorous academic discipline and a host of extra-curricular activities. This school has a strength of 1,151 students, with 28 sections and 43 teachers.

The medium of instruction is English, but ample opportunities are provided to students to study Kannada, Hindi and Sanskrit as well. The academic training is supplemented with efficient library work and internet facilities, so

that the students can get more information for their projects and general knowledge. There is computer-assisted learning, and, Science and Mathematics laboratory facilities. Linguaphone is also available to students to improve their skills in spoken English. There are ten Hobby Clubs through which students can interact with the teachers and other students with a common interest to further their creative interest especially in games, music, dramatics, arts and crafts, elocution, essay writing, project work in Science and Mathematics, computer skills, spoken English and so on.

As the mind needs stimulation through study, the soul needs to be stirred at a higher plane. For this, Yoga and Bhajanas are held regularly to give impetus to the alround development of the students. Physical Education Training programmes keep them fit. The Brass Band is the pride of JSS Public School, Siddharthanagar.

To keep the parents tuned into their wards, progress, Parents-Teachers Meetings are held on the first Saturday of every month. The result of this is closely monitored to enhance the academic standards. All the successive years from the very beginning, the school has achieved not only 100% results, but also 100% first classes in later years. There is a steady increase in the number of students obtaining 90% above (this year it is 26 out of 66), a record in Mysore. Kum. K.M. Priyanka is this year's topper of the school, securing 96.8%. Considerting A1 grades in X Std. in CBSE, we are again one of the top schools in India. The school intends to continue hard and dedicated work in all spheres, as the saying goes, "Work kills no one, but worry kills multitudes". Where is the time to worry?

The old students who passed out from here have occupied great positions in their life. We have invited some of them to be the Chief Guests in the various school functions. So far, Physiotherapitst, Mr. Pruthviraj (1994 batch), Resident Surgeon Dr. S. Jayashree (1995 batch), Airtel Manager Mr. Nagarjun, AutoFin Financial Manager Mr. Kuttappa and Managing Director (Wind Flower) Mr. Tarun Giri (all from 1994 batch) have been the chief guests on different occasions, and, their presence has inspired the present students to achieve greater goals in life.

It is 18 eventful years, and still counting; the credit shall naturlly ago to the faculty of the school and the management.

## JSS MAHAVIDYAPEETHA'S BRANCH OPENED IN US

Installation of idols of Gods and opening of a branch of JSS Mahavidyapeetha was done at the JSS Spiritual Centre of Maryland in USA recently.

The Executive of Montgomery Country, Mr. Isiah Leggett who was the Chief Guest said "to whichever country or religion we belong, whether we are rich or poor, it is imperative that we live in harmony. Such relationships based on mutual understanding are possible only through spiritual pursuit".

Sri Siddheshwara Swamiji of Bijapur Jnanayogashrama explained that only by giving up jealousy and hatred, one can experience real happiness, It was important to turn one's mind towards achieving intrinsic stability without getting swayed by external possessions, the Swamiji suggested.

"The Spiritual Centre has been established here in accordance with the wishes of Dr. Shivarathri Rajendra Swamiji. As a result of seers and holy personalities visiting the Centre, its scope of activities is expanding". said Sri Shivarathri Deshikendra Swamiji.

Sri Charukeerthi Bhattaraka Swamiji of Moodabidre, India's ambassador to the US Sri Sanjay Sinha, MLA Sri C.S. Puttaraju, AKKA President Sri Amaranatha Gowda, Working President Sri Ravi Dankanikote, Vice-President of America's Jain Samaja Sri Sushil Jain, Vokkaliga Sangha President Sri Vishwamithra, Washington DC Cauvery Kannada Koota President Meena Rao, VSNA President Sri Sundaresh Siddaiah, Vivekananda Research Institute's Sri Ashok Kumar and Columnist Sri Srivasta Joshi also spoke. on the occation.

Former Minister Smt. Leeladevi R. Prasad and others participated in the function. □



ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಎವಲ್ಯೂಷನ್-2009 ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರ, ಡಾ. ಎಸ್.ಸಿ. ಹಿರೇಮಠ, ಡಾ. ರವಿಶಂಕರ್, ಡಾ. ಕಾರಂತ್ ಮತ್ತು ಡಾ. ಮಿಶ್ರಾ



ಜೆಎಸ್‌ಎಸ್ ವಿವಾಹವೇದಿಕೆಯ ವೆಬ್‌ಸೈಟ್ ಅನ್ನು ದಿನಾಂಕ 17.7.2009 ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್ ಅವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಜಿ. ಚನ್ನಬಸಪ್ಪ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಕೆ.ಎಂ. ನಾಗಣ್ಣಾಚಾರ್, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಎಚ್.ಎಸ್. ನಾಗರಾಜ್ ಮತ್ತು ಶ್ರೀ ಮಲ್ಲೇಸ್ವಾಮಿ ಅವರುಗಳಿದ್ದಾರೆ



ಸುತ್ತೂರು ಶ್ರೀಮಠದಲ್ಲಿ ಶ್ರಾವಣಮಾಸ ಪ್ರವಚನ ಕಾರ್ಯಕ್ರಮವನ್ನು ಶ್ರೀ ಡಿ.ಎಸ್. ವಿಶ್ವನಾಥ್ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಮಹಾವಿದ್ಯಾಪೀಠದ ಉಪಕಾರ್ಯದರ್ಶಿ ಶ್ರೀ ಎಸ್.ಪಿ. ಮಂಜುನಾಥ್, ಮಲ್ಲನಮೂಲೆ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ಸ್‌ನ ಅಧ್ಯಕ್ಷರಾದ ಪ್ರೊ. ಕೆ. ಆರ್. ಮಲ್ಲಿಕಾರ್ಜುನಪ್ಪ ಮತ್ತು ಶ್ರೀ ಎಸ್. ಶಿವಕುಮಾರಸ್ವಾಮಿಗಳವರನ್ನು ಕಾಣಬಹುದು



ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್ನಿನಲ್ಲಿ ಸ್ಥಾಪಿತವಾಗಿರುವ ದೇವಸ್ಥಾನದ ಹೊರನೋಟ



ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ನಡೆದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಮೂಡಬಿದರೆ ಜೈನಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿದರು. ಚಿತ್ರದಲ್ಲಿ ಶ್ರೀ ಬಸವರಾಜ ಪುರಾಣಿಕ, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಶ್ರೀ ಸುಶೀಲ್ ಜೈನ್, ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ, ಪೂಜ್ಯ ಜಗದ್ಗುರು ಶ್ರೀ ಸುತ್ತೂರು ಸ್ವಾಮೀಜಿ, ಶ್ರೀ ಅಮರನಾಥಗೌಡ, ಶ್ರೀ ವಿಶ್ವಾಮಿತ್ರ, ಶ್ರೀ ಸಿ.ಎಸ್. ಪುಟ್ಟರಾಜು ಮತ್ತು ಶ್ರೀ ರವಿ ಡೆಂಕಣಿಕೋಟೆ ಅವರನ್ನು ಕಾಣಬಹುದು


ಸಂಪಾದಕ: ಆರ್.ಎಸ್. ಪೂರ್ಣಾನಂದ

ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

ದೂರವಾಣಿ: 2548211, 2548212 ಫ್ಯಾಕ್ಸ್: 2548218 e-mail: jsspbln@yahoo.com ಮುದ್ರಣ: ಭಾಸ್ಕರ್ ಪ್ರಿಂಟರ್ಸ್, ಮೈಸೂರು